# ನಕ್ಕುಬಿಡಿ



ಗಾಂಪ: ಸರ್, ನಮ್ಮನೇಲಿ ಕಳ್ಳತನ ಆಗಿದೆ ಬೇಗ ಬನ್ನಿ.
ಪೊಲೀಸ್: ರೀ ಹೋದ ವಾರನೇ ಹೇಳಿದ್ನಲ್ಲ, ಕಿಟಕಿ ಬಾಗಿಲು ಮುಚ್ಚಿ ಮಲಗಿಕೊಳ್ಳಿ ಅಂತ.
ಗಾಂಪ: ನಾನು ಕಿಟಕಿ ಮುಚ್ಚೇ ಮಲ್ಕೊಂಡಿದ್ದೆ ಸರ್.
ಪೊಲೀಸ್: ಮತ್ತೆ ಕಳ್ಳತನ ಹೇಗಾಯ್ತು?
ಗಾಂಪ: ನನ್ನ ಹೆಂಡ್ತಿ ತುಂಬಾ ಸೆಕೆ ಅಂದ್ಲು. ಅದ್ಕೆ ಬಾಗಿಲು ತೆಗೆದುಕೊಂಡು ಮಲಗಿದ್ವಿ ಸರ್!

★★★

ಲಲಿತಾ: ರೀ ನಮ್ಮಗ ರಾಜು, ಸೊಸೆ ಪರಿಮಳಗೆ ಡೈವೋರ್ಸ್ ಕೊಡಬೇಕು ಅಂತಿದಾನೆ. ಅವನನ್ನು ಕರೆದು ಬುದ್ಧಿ ಹೇಳ್ರೀ.
ರಾವ್: ನಾನ್ಯಾಕೆ ಬುದ್ಧಿ ಹೇಳಲಿ?
ಲಲಿತಾ: ನನಗಿಲ್ಲದ ಅವಕಾಶ ಅವನಿಗೆ ಸಿಕ್ತಾ ಇದೆ ಅಲ್ವಾ ಅದ್ಕೆ!

ಪದ್ಮಾ: ಅನ್ಯಾಯ ಕಣ್ರೀ, ನೀವು ದಿನಾ ವಾಕಿಂಗ್ ಕರ್ಕೊಂಡು ಹೋಗ್ತಿದ್ದ ನಿಮ್ಮನೆ ನಾಯಿ ಸತ್ ಹೋಯ್ತಂತೆ.
ಗೌರಿ: ಹೌದು ರೀ.
ಪದ್ಮಾ: ಮತ್ತೆ ವಾಕಿಂಗ್‌ಗೆ ಈಗ ಯಾರನ್ನ ಕರ್ಕೊಂಡ್ ಹೋಗ್ತಿದ್ದೀರಿ.
ಗೌರಿ: ಇನ್ನೇನ್ ಮಾಡ್ಲಿ ನಮ್ಮೆಜಮಾನರನ್ನೇ ಕರ್ಕೊಂಡು ಹೋಗ್ತೀನಿ

★★★

ಶಶಿ: ಸಾವಿನ ಬಗ್ಗೆ ಪಿಎಚ್‌ಡಿ ಮಾಡ್ತಿದ್ರಲ್ಲ ಅದು ಎಲ್ಲೀವರೆಗೂ ಬಂತು.
ಗೋಪಿ: ಎಲ್ಲಾ ಆಗಿದೆ, ಸಾವಿನ ಅನುಭವ ಮಾತ್ರ ಬರೀಬೇಕು.
ಶಶಿ: ಬರೀರಿ ಮತ್ಯಾಕೆ ತಡ.
ಗೋಪಿ: ಅಲ್ಲಾ... ಸಾವಿನ ಅನುಭವ ಹೇಳೋರು ಯಾರು.
ಶಶಿ: ನೀವೇ ಸತ್ ಹೋದ್ರೆ ಗೊತ್ತಾಗುತ್ತಪ್ಪ.

★★★

ರಾವ್: ಯಾಕ್ ಸಾರ್ ಬಹಳ ಬೇಜಾರಲ್ಲಿದ್ದೀರಿ?
ಸೀನು: ನನಗಿರೋದು ಒಬ್ಬನೇ ಮಗ, ಒಬ್ಬಳೇ ಮಗಳು. ಆದರೆ, ಅವರಿಗೆ ಮದುವೆ ಮಾಡೋಕೆ ಆಗಲೇ ಇಲ್ಲ.
ರಾವ್: ಅಯ್ಯೋ ಪಾಪ, ಯಾಕೆ ಯಾವುದೂ ಸರಿಯಾದ ಸಂಬಂಧಗಳು ಬರಲಿಲ್ವೇ?
ಸೀನು: ನಾನು ಹೇಳಿದ್ದು ನಾನು ಮದುವೆ ಮಾಡಲಿಲ್ಲ ಅಂತ.
ರಾವ್: ಹಾಗಂದ್ರೆ?
ಸೀನು: ಹಾಗಂದ್ರೆ, ಮುಂಡಾ ಮುಚ್ಚು ಅವ್ರೇ ಲವ್ ಮಾಡಿ ಮದುವೆ ಮಾಡ್ಕೊಂಡ್ರು ಅಂತ

★★★

ಮೇಷ್ಟ್ರು: ನಿಮ್ಮಗನ್ನ ನಿಮ್ಮಮ್ಮನ ಹೆಸರೇನು ಅಂತ ಕೇಳಿದರೆ ಗೊತ್ತಿಲ್ಲ ಅಂತಾನಲ್ರೀ.
ಸುಬ್ಬು: ಹೌದು ಸರ್, ನಮ್ಮಮ್ಮ ಸತ್ತುಹೋಗಿ ಐದು ವರ್ಷ ಆದ ಮೇಲೆ ಅವನು ಹುಟ್ಟಿದ್ದು ಅದಕ್ಕೆ ಅವನಿಗೆ ನಮ್ಮಮ್ಮನ ಹೆಸರು ಗೊತ್ತಿಲ್ಲ!

★★★

ಹೆಂಡ್ತಿ: ರೀ ಕಳ್ಳರು ಅಂದ್ರೆ ಹೇಗಿರ್ತಾರೆ?
ಗಂಡ: ಯಾಕೆ ಅದೆಲ್ಲ ನಿನಗೆ.
ಹೆಂಡ್ತಿ: ಅಲ್ಲಾ ರೀ. ದಪ್ಪಗೆ, ಕಪ್ಪಗೆ, ಕೋರೆದಾಡಿ ಹಲ್ಲು, ತಲೆ ತುಂಬಾ ಕೂದಲು ಹೀಗೆಲ್ಲ ಇರ್ತಾರಾ?
ಗಂಡ: ಹಾಗೂ ಇರಬಹುದು ಇಲ್ದೆ ನನ್ನ ತರಾನೂ ಇರಬಹುದು.
ಹೆಂಡ್ತಿ: ನಿಮ್ಮ ತರ ಅಂದ್ರೆ.
ಗಂಡ: ನಾನು ನಿನ್ನ ಸಾಕಿವೆ ಡಬ್ಬದಿಂದ ಕಾಸು ಕದ್ದಿದ್ದೀನಿ, ನಿಂಗೊತ್ತಾಯ್ತಾ?

★★★

ಸೋಮು: ವಯಸ್ಸಾದ ಮೇಲೆ ಕಣ್ಣು ಕಾಣದೇ ಇರೋದು, ಕಿವಿ ಕೇಳದೇ ಇರೋದು ವರಾನೋ ಶಾಪಾನೋ.
ಧರ್ಮ: ನಿಜವಾಗಿ ಕಣ್ಣು ಕಾಣದೆ ಕಿವಿ ಕೇಳದೇ ಹೋದರೆ ನರಕ. ಆದರೆ ಹೆಂಡ್ತಿ ಮುಂದೆ ನಾವು ಹಾಗೆ ನಾಟಕ ಆಡಿದರೆ ಅದು ಸ್ವರ್ಗ!

★★★

ಪತ್ನಿ: ರೀ ನಾನು ತವರಿಗೆ ಬಂದ ಮೇಲೆ ಮನೆಗೆ ಯಾವುದಾದರೂ ಪಿಶಾಚಿ, ದೆವ್ವ, ಭೂತ ಬಂದಿತ್ತಾ?
ಪತಿ: ನೀನಿಲ್ದೇ ಇರುವಾಗ ಅವು ಯಾಕೆ ಬರುತ್ತೆ ಹೇಳು. ನೀನು ಬಂದ ಮೇಲೆ ಬರುತ್ತೆ ನಿನಗೆ ಕಂಪನಿ ಕೊಡೋಕೆ.

(ಸಂಗ್ರಹ) ಸುಕೇಶವ, ಬೆಂಗಳೂರು


